ಔಷಧಿ ಕಡಿಮೆ ಇದೆ ಇನ್ನಷ್ಟು ಬೇಕು ಎಂದರೆ ಅದನ್ನೂ ಕೊಡಲಿಕ್ಕೆ ತಯಾರಿದ್ದೇವೆ. ಅಲ್ಲದೆ ಧಾರವಾಡದಿಂದ ಇತರೇ ಜಿಲ್ಲೆಗಳಿಗೂ ಈ ಕಾಲರಾ ರೋಗ ಹರಡುವ ಸೂಚನೆ ಇರುವುದರಿಂದ ಇದರ ಬಗ್ಗೆ ಈಗಾಗಲೇ ಮುಂಜಾಗರೂಕತೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೇನೆ.

ಮನವಿಗಳು

(ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಸ್ವಾಮಿರಾವ್.—ನಾನು ಹಿಂಳಿಲ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೇನೆ. ತೀರ್ಥಹಳ್ಳಿ ಸೇಡಗಾರ ಗ್ರಾಮದಲ್ಲಿರುವ ಒಬ್ಬ ಸಣ್ಣ ಗೇಣಿದಾರನಾದ ರಾಮಾನಾಯಕನ ಕೊಲೆ ಬಗ್ಗೆ ಮಾತನಾಡುವುದಕ್ಕೆ ಆ ಬಗ್ಗೆ ಸಂಕ್ಷಿಪ್ತವಾಗಿ ಹೇಳಲಿಕ್ಕೆ ಒಂದು ನೋಟೀಸ್ ಕೊಟ್ಟಿದ್ದೇನೆ.

ಉಪಸಭಾಪತಿಗಳು.—ಆ ವಿಷಯ ನಾಳೆ ಬರುತ್ತದೆ. ಮಾತನಾಡಿ.

ಶ್ರೀ ಪಂಪಾಪತಿ.—ಸ್ವಾಮಿ, ಉಪಾಧ್ಯಾಯರು ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬಗ್ಗೆ ನಾನು ಒಂದು ನೋಟೀಸ್ ಕೊಟ್ಟಿದ್ದೇನೆ. ಇದು ಬಹಳ ಸೀರಿಯಸ್ ಮ್ಯಾಟರ್.

ಉಪಸಭಾಪತಿಗಳು.—ತಾವು ಈವೊತ್ತು ನೋಟೀಸ್ ಕೊಟ್ಟು ಈವೊತ್ತೇ ಉತ್ತರಬೇಕು ಎಂದರೆ ಹೇಗೆ.

ಶ್ರೀ ಪಂಪಾಪತಿ.—ನಾಳೆಯಾದರೂ ಬರುತ್ತದೆಯೇ?

ಉಪಸಭಾಪತಿಗಳು.—ನೋಡೋಣ. ಅದಷ್ಟು ಜಾಗ್ರತೆ ಬರುತ್ತದೆ.

ಶ್ರೀ ವೀರಪ್ಪಮೊಯ್ಲಿ.—ಮಾನ್ಯ ಸಭಾಪತಿಗಳೇ, ಈಗಾಗಲೇ ನಾನು ಹಿಂಳಿಲ ರೂಲು ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೇನೆ. ಅದರ ವಿವರ ಈ ರೀತಿ ಇದೆ. ತಾರೀಕು ೬ನೇ ಜುಲೈ ೧೯೮೩ ರಂದು ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿರುವ ಮುಂದಿನ ರೋಡ್‌ನಲ್ಲಿ ಹೋಟೆಲ್ ರಿವೋಳಿ ಪಕ್ಕದಲ್ಲಿರುವ ಒಬ್ಬ ತರುಣ ಪ್ರಕಾಶ್ ಎನ್ನತಕ್ಕವನು ಏನು ಇದ್ದಾನೆ ಅವನು ಒಬ್ಬ ಸಮಾಜ ಸೇವಕ ಹಾಗೂ ಬೆಂಗಳೂರು ನಗರದಲ್ಲಿ ವೇಶ್ಯಾವಾಟಿಕೆ ಏನು ನಡೆಯುತ್ತಿದೆ ಅದರ ವಿರುದ್ಧವಾಗಿ ಹೋರಾಟ ಮಾಡತಕ್ಕಂಥ ತರುಣ.

೧-೩೦ ಪಿ.ಎಂ.

ಈ ತರುಣ ಆಗ್ಯಾಗೆ ಗಣೇಶ ಉತ್ಸವದ ಸಮಾರಂಭಗಳನ್ನು ಏರ್ಪಡಿಸುತ್ತಿದ್ದ. ಪ್ರಕಾಶನ ಫೋಟೋ ಕೂಡ ಇಲ್ಲಿದೆ. ಕಳೆದ ವರ್ಷ ಇದೆಹೊತ್ತಿಗೆ ಗಣೇಶನ ಉತ್ಸವ ಸಮಾರಂಭವನ್ನು ಆಚರಣೆ ಮಾಡಿ ಅವರ ಜೊತೆಯಲ್ಲಿ ಸಾಂಗ್ಲಿಯಾನ ಮತ್ತು ಸನ್ಮಾನ್ಯ ಜತ್ತಿಯವರ ಜೊತೆಯಲ್ಲಿ ಫೋಟೋ ತೆಗೆಯಿಸಿಕೊಂಡಿರುವುದು ಇಲ್ಲಿದೆ.

SRI A. LAKSHMISAGAR.—Photograph can be taken with any dignitory.

SRI M. VEERAPPA MOILY.—Everything you are taking very lightly. This is a very serious matter.

(INTERRUPTIONS)

ಶ್ರೀ ಎ. ಲಕ್ಷ್ಮೀಸಾಗರ್.—ನಾನು ತಮ್ಮ ವಿರುದ್ಧವಾಗಿ ಹೇಳಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ನಾವು ಹೇಳುವಾಗ ಲಘುವಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಲಘುವಾಗಿ ಹೇಳಲಿಲ್ಲ, ತಮ್ಮ ವಿರುದ್ಧವಾಗಿಯೂ ಹೇಳಲಿಲ್ಲ. ತಾವೇಕೆ ಹಾಗೆ ಕೂಗಾಡುತ್ತಿದ್ದೀರಿ ?

ಶ್ರೀ ಎಂ. ವೀರಪ್ಪಮೊಯಿಲಿ.—ಒಬ್ಬ ತರುಣ ತನ್ನ ಪಕಾರದಲ್ಲಿ ಅವನು ಒಂದು ರೀತಿಯ ಹೋರಾಟ ಮಾಡಿಕೊಂಡು ಸಾರ್ವಜನಿಕರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡಿದ್ದ. ಕಳೆದ ವರ್ಷ ಏನೊಂದು ಸಮಾರಂಭವನ್ನು ಅವನು ಮಾಡಿದ್ದ ಆ ಸಮಾರಂಭಕ್ಕೆ ಈ ವರ್ಷ ಈ ತರುಣ ಇಲ್ಲ. ಈ ತರುಣ ಇಂದು ಕಣ್ಮರೆಯಾಗಿದ್ದಾನೆ. ೬-೭-೮೩ ರಂದು ಈ ಹುಡುಗನ ಕೊಲೆ ಆ ಪ್ರದೇಶದಲ್ಲಿಯಾಯಿತು. ಕೊಲೆ ಮಾಡಿದ್ದನ್ನು ಅವನ ಭಾವ ಮೈದುನ ಕಣ್ಣಾರೆ ನೋಡಿದ್ದಾರೆ. ಅನೇಕ ಹತ್ತಿರದ ಜನ ಕೂಡ ನೋಡಿದ್ದಾರೆ. ಆ ಪ್ರದೇಶದಲ್ಲಿ ಯಾರು ಇದನ್ನು ನೋಡಿದ್ದಾರೆ ಅವರು ಏನೊಂದು ಅರ್ಜಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರೆಲ್ಲಾ ಸೈನ್ ಮಾಡಿದ್ದಾರೆ. ಅದನ್ನು ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದೇನೆ. ಅವರ ಹೆಸರನ್ನು ನಾನು ಇಲ್ಲಿ ಹೇಳಿ ಇನ್‌ವೆಸ್ಟಿಗೆ ಷನ್‌ಗೆ ತೊಂದರೆ ಮಾಡಲಿಕ್ಕೆ ಹೋಗುವುದಿಲ್ಲ. ಯಾವ ದೃಷ್ಟಿ ಪ್ರವೃತ್ತಿ ವಿರುದ್ಧ ಈ ಹುಡುಗ ಹೋರಾಟ ಮಾಡಲಿಕ್ಕೆ ಹೊರಟ ಆ ಯುವಕ ಇಂದು ಈ ಒಂದು ದುಷ್ಟ ಶಕ್ತಿಗಳಿಗೆ ಬಲಿಯಾಗಿದ್ದಾನೆ. ಈ ಹುಡುಗನ ಬಾವ ಮೈದುನ ವಿಲ್ಸನ್‌ಗಾರ್ಡನ್ ಪೋಲೀಸ್ ಸ್ಟೇಷನ್‌ಗೆ ಇದರ ಬಗ್ಗೆ ಅರ್ಜಿಯನ್ನು ಕೊಡಲಿಕ್ಕೆ ಹೋದಾಗ ಅಲ್ಲಿರತಕ್ಕ ಪದ್ಮನಾಭಶೆಟ್ಟಿ ಎನ್ನುವವರು ಇವರ ಅರ್ಜಿಯನ್ನು ಸ್ವೀಕಾರ ಮಾಡಿಲ್ಲ. ಮಾರನೆಯದಿವಸ ಅರ್ಜಿಯನ್ನು ಕೊಡಲಿಕ್ಕೆ ಹೋದರೆ ಆ ದಿವಸ ಕೂಡ ಅರ್ಜಿಯನ್ನು ತೆಗೆದುಕೊಳ್ಳಲಿಲ್ಲ. ಆನೆಯ ತಾರೀಖು ಮಾತ್ರ ಪೋಲೀಸ್ ಸ್ಟೇಷನ್‌ನವರು ಅರ್ಜಿಯನ್ನು ತೆಗೆದುಕೊಂಡಿದ್ದಾರೆ. ಮತ್ತು ಇವರಿಗೆ ಒಂದು ಅಕ್ನಾಲೆಡ್ಜ್‌ಮೆಂಟ್ ಕೊಟ್ಟಿದ್ದಾರೆ. ಅದರ ಪ್ರಕಾರ ಎಫ್ ಐ ಆರ್ ಳಳಟ-೮೩ ಅದನ್ನು ರಿಜಿಸ್ಟರ್ ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಪಾನ್ಯ ವಿರೋಧಪಕ್ಷದ ನಾಯಕರು. ಈ ಘಟನೆಯ ಬಗ್ಗೆ ಕಂಪ್ಲೇಂಟ್ ಕೊಟ್ಟಿದ್ದಾರೆ, ಕೊಲೆಯಾಗಿದೆ ಎಂದು ಹೇಳುತ್ತಿದ್ದಾರೆ, ಇದನ್ನು ಗಣನೆಗೆ ತೆಗೆದುಕೊಳ್ಳತಕ್ಕವರು ಯಾರು ? ಸಾರ್ವಜನಿಕ ಕುಂದುಕೊರತೆಗಳ ಮಂತ್ರಿಗಳೇನೋ ಇದ್ದಾರೆ, ಆದರೆ ಗೃಹ ಮಂತ್ರಿಗಳು ಇರಬೇಕಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—The Minister for Grievances is here. ಇದರ ಬಗ್ಗೆ ಪೋಲೀಸ್ ಸ್ಟೇಷನ್‌ನವರು ಆನೆಯ ತಾರೀಖು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಪ್ರಕಾಶ್‌ನನ್ನು ಕೊಂದು, ತಲೆಗೆ ಹೊಡೆದು, ಅವನ ಕಿವಿಯ ಹೊರಗೆ ಬಂದಿದೆ. ಇದಕ್ಕೆ ಐ ವಿಟ್ನೆಸ್ ಹೇಳುವವರು ಇದ್ದಾರೆ. ಕೊಳಚೆ ಗುಂಡಿಯಲ್ಲಿ ಇವನನ್ನು ಹಾಕಿದ್ದಾರೆ. ಆದರೆ ಇವನ ಹೆಣ ಇವತ್ತಿನವರೆಗೂ ಸಿಕ್ಕಿಲ್ಲ, ನಾಪತ್ತೆಯಾಗಿದೆ ಇವನನ್ನು ಎತ್ತಿಕೊಂಡು ಬಂದು ತಲೆ, ಕಾಲನ್ನು ಬಿಟ್ಟಿದ್ದಾರೆ. ಆದರೆ ಇವನ ಹೆಣ ಮಾತ್ರ ಮಾಯವಾಗಿದೆ. ಇದನ್ನು ನೋಡಿದವರು ತಕ್ಷಣವೆ ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟರೆ ಪೋಲೀಸ್ ಅಧಿಕಾರಿಗಳು ತಕ್ಷಣ ಕ್ರಮ ತೆಗೆದುಕೊಂಡಿಲ್ಲ. ಹುಡುಗನ ತಂದೆ ತಾಯಪ್ಪ ಮುಖ್ಯ ಮಂತ್ರಿಗಳಿಗೆ ದೂರು ಕೊಟ್ಟಿದ್ದಾನೆ, ಬೆರೆಯವರಿಗೆ ಕೊಟ್ಟಿದ್ದಾರೆ, ಆದರೆ ಯಾರೂ ಇದರ ಕಡೆ ಗಮನಕೊಟ್ಟಿಲ್ಲ. ಕೊನೆಗೆ ಅವರು ನನ್ನ ಮನೆಯ ಹತ್ತಿರ ಬಂದು ನನಗೆ ಯಾರೂ ದಿಕ್ಕಿಲ್ಲ, ತಾವೂ ಕೂಡ ನನ್ನ ರಕ್ಷಣೆ ಬರದಿದ್ದರೆ ನಾನು ನಾಳೆಯ ದಿವಸವೇ ನೇಣು ಹಾಕಿಕೊಂಡು ಸಾಯುತ್ತೇನೆಂದು ಆ ಮುದುಕ ಹೇಳಿದ್ದರಿಂದ ನಾನು ಇದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಯಾವ ಯಾವ ವ್ಯಕ್ತಿಗಳು ಇವನನ್ನು ಕೊಲೆ ಮಾಡಿದರು, ಕೊಲೇ ಮಾಡಲಿಕ್ಕೆ ಸಂಚು ಹೂಡಿದ್ದರು ಪ್ರಕಾಶನನ್ನು ಉಳಿಸಿದರೆ ನಮಗೆ ತುಂಬಾ ತೊಂದರೆಯಾಗುತ್ತದೆ ಎಂದು ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿದವರೂ ಕೂಡ ಸಾಕ್ಷಿ ಹೇಳುವುದಕ್ಕೆ ಮುಂದೆ ಬಂದಿರುವಾಗ ಇವತ್ತಿನವರೆಗೂ ಕೂಡ ಇದನ್ನು ಪೋಲೀಸ್ ಯಾವ ರೀತಿಯಲ್ಲಿಯೂ ವಿಚಾರಣೆ ಮಾಡಿಲ್ಲ ದೊರೆಯತನಕ ದೂರುಕೊಟ್ಟರೂ ಸಹ ಯಾರೂ ಇದನ್ನು ಗಮನಕ್ಕೆ ತೆಗೆದು ಕೊಳ್ಳಲಿಲ್ಲ. ನಾನು ಮಾತ್ರ ಈಗ ಇದನ್ನು ಹೇಳಿದ್ದೇನೆ. ಬಹಶಃ ಇಂಥ ಮರ್ಡರ್ ವಿಚಾರವನ್ನು ಹೇಳಿ ನಾನು ಸರ್ಕಾರವನ್ನು ಪೇಚಿಗೆ ಸಿಕ್ಕಿಸುವಂಥ ಪ್ರಸಂಗ ಇಲ್ಲಿಲ್ಲ. ೫೫ ವರ್ಷದ ಮುದುಕ ವಿಚಾರವನ್ನು ಹೇಳಿದರೂ ಸಹ ಪೋಲೀಸರು ಏನನ್ನೂ ವಿಚಾರ ಮಾಡಿಲ್ಲ. ಅವರು ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ ಇದರ ವಿಚಾರಣೆಯಾಗಿಲ್ಲ, ಇದು ಡಬ್ಬಲ್ ರೋಡಿನ ರಿಪೋಲಿ ಹೋಟೇಲ್ ಹತ್ತಿರ ಇರುವ ರೋಡಿನಲ್ಲಿ ಆಗಿದೆ, ಇದಲ್ಲದೆ ಇನ್ನೊಂದು ಕೊಲೆಯ ವರ್ತಮಾನ ಕೂಡಾ ನಮಗೆ ಬಂದಿದೆ. ಇದನ್ನು ನೋಡಿಕೊಂಡು ಪೋಲೀಸರು ಸುಮ್ಮನೆ ಇರುವುದಕ್ಕೆ ಕಾರಣವೇನು? ಕೆಲವರು ಹೇಳುತ್ತಾರೆ ಪೋಲೀಸರಿಗೆ ಇದರ ಸಂಭಂದದಲ್ಲಿ ೫೦ ಸಾವಿರ ರೂಪಾಯಿಗಳನ್ನು ಕೊಟ್ಟಿದಾರೆಂದೂ ಇಂಥ ಒಂದು ದೌರ್ಜನ್ಯ ಒಬ್ಬ ಸಮಾಜ ಸೇವಕನಮೇಲೆ ಈ ರಾಜ್ಯದಲ್ಲಿ ನಡೆಯಿತೆ ಬಹುಶಃ ಯಾರೂ ಕೂಡ ಇದನ್ನು ಪತ್ತೆ ಮಾಡದಿದ್ದರೆ, ಮತ್ತು ಈ ದೌರ್ಜನ್ಯಗಳನ್ನು ಪ್ರತಿಭಟನೆ ಮಾಡಲಿಕ್ಕೆ ಹೋಗಲಿಲ್ಲ ಎಂದರೆ ಜನತೆಯ ಗತಿಯೇನು ಎಂದು ನಾವು ಯೋಚನೆ ಮಾಡ

ಬೇಕಾಗಿದೆ. ಈ ತರುಣ ಈ ಪರ್ಷ ಗಣೇಶನ ಸಮಾರಂಭವನ್ನು ಮಾಡಬೇಕಾಗಿತ್ತು. ಆದರೆ ಇವನ ಕೊಲೆಯಾಗಿದೆ. ಮಾನ್ಯ ರಘುಪತಿಯವರು ಗಮನಿಸಬೇಕು ಈ ಹುಡುಗ ನಾಪತ್ತೆಯಾಗಿದ್ದಾನೆ, ಮತ್ತು ಆತನ ಕೊಲೆಯಾಗಿದೆ. ಆತನ ಕೊಲೆ ಅಮಾನುಷ ರೀತಿಯಲ್ಲಿ ಆಗಿದೆ ಅದೂ ಬೆಂಗಳೂರು ನಗರದ ಮಧ್ಯದಲ್ಲಿ ಆಗಿದೆ. ಕಣ್ಣಾರೆ ಜನರು ಆಲ್ಲಿರತಕ್ಕವರು ನೋಡಿದ್ದಾರೆ. ಆದರೆ ಪೋಲೀಸರು ಮಾತ್ರ ಇನ್ನೂ ಆದರ ತನಿಖೆ ಮಾಡಲಿಲ್ಲ. ಎಂದರೆ ಆವರಿಗೆ ಯಾರೂ ರಕ್ಷಣೆಗೆ ಬರಬೇಕು ? ಈ ಮಾದುಕ ತಾಯಪ್ಪನನ್ನು ನೋಡಿದಾಗ ನಮಗೆ ಕಣ್ಣೀರು ಬರುತ್ತದೆ. ಈ ವ್ಯಕ್ತಿಯು ವಿಚಾರದಲ್ಲಿ ಸರ್ಕಾರದವರು ಯಾವುದೇ ರೀತಿಯ ನಿರ್ಣಯದ ತನಿಖೆಯನ್ನು ಮಾಡದೆ ಇರುವುದನ್ನು ತಪ್ಪು ಗಮನಕ್ಕೆ ತಂದು ನಾನು ಇದರ ಬಗ್ಗೆ ಒಂದು ಕಾಗದವನ್ನು ಬರೆದಿದ್ದೇನೆ. ಹಾಗೆಯೇ ಸಂಬಂಧಪಟ್ಟ ಆರ್ಜಿಗಳನ್ನು ನಾನು ಕಳುಹಿಸಿಕೊಡುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಪರನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಈ ಜಾಲದಲ್ಲಿ ಯಾರು ಯಾರು ಇದ್ದಾರೆ, ಯಾರು ತಪ್ಪಿತಸ್ಥರಿದ್ದಾರೆಂದು ಕಂಡು ಹಿಡಿದು ಶಿಕ್ಷಿಸಬೇಕು. ಲೀಲಾಜಾಲವಾಗಿ ಬಂದು ತಪ್ಪು ಮಾಹಿತಿ ಮಾಡತಕ್ಕವರನ್ನು, ಅಪ್ರವೃತ್ತಿ ಹೊಂದಿದವರನ್ನು ಹಿಡಿದು ಅದನ್ನು ನಿಗ್ರಹಿಸತಕ್ಕ ಶಕ್ತಿಯನ್ನು ಸರ್ಕಾರ ತೋರಿಸಬೇಕು ಮತ್ತು ಇದರ ಬಗ್ಗೆ ವಿವರವಾದ ಹೇಳಿಕೆಯನ್ನು ಸಭೆಗೆ ಕೊಡಬೇಕು. ಇಂಥ ಅಮಾನುಷ ಕೊಲೆಗಳು ರಾಜ್ಯದಲ್ಲಿ ಆದರಲ್ಲಿಯೂ ಬೆಂಗಳೂರಿನಲ್ಲಿ ಇನ್ನು ಮುಂದಕ್ಕೆ ಆಗದೆ ಇರುವಂತೆ ಸೂಕ್ತ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಪ್ರಕಾಶ್ ಇವರ ಕೊಲೆ, ಇದು ಬಹಳ ದುಃಖಿಕರವಾದ ವಿಷಯ.

ಶ್ರೀ ಧರ್ಮಸಿಂಗ್.—ಮಾನ್ಯ ಮಂತ್ರಿಗಳು ಪೋಲೀಸರ ವರದಿಯನ್ನು ತರಿಸಿ ಮಾತನಾಡ ಬೇಕೇ ಹೊರತು ಎಲ್ಲದಕ್ಕೂ ತಾವು ಈ ರೀತಿಯಲ್ಲಿ ಭಾಷಣ ಮಾಡಿದರೆ ಹೇಗೆ ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಇದು ಬಹಳ ದುರದೃಷ್ಟಕರ. ಮುಖ್ಯಮಂತ್ರಿಗಳು ಇದ್ದಾರೆ, ಅವರಿಗೆ ಸಹಾಯಕ ಮಂತ್ರಿಗಳೂ ಇದ್ದಾರೆ, ಅನೇಕ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಿರುತ್ತಾರೆ. ಇಲ್ಲಿ ಯಾವುದಕ್ಕೂ ಉತ್ತರ ಹೇಳಿದ ಹಾಗೆ ಹೇಳಿದರೆ ಇದು ಬಹಳ ಬೇಜವಾಬ್ದಾರಿತನದ ಕೆಲಸವಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಎಂ. ರಘುಪತಿ.—ಮಂತ್ರಿಗಳ ಕೆಲಸ ಮಾಡಿದವರಿಗೆ ಏನು ಜವಾಬ್ದಾರಿ ಇರುತ್ತದೆ ಎನ್ನುವುದೂ ಗೊತ್ತಿರುತ್ತದೆ. ಅವರು ಯಾವ ರೀತಿಯಲ್ಲಿ ಜವಾಬ್ದಾರಿತನದಿಂದ ಕೆಲಸ ಮಾಡಿದ್ದರು ಎಂದು ನಾನು ಕೇಳಬೇಕಾಗುತ್ತದೆ.

SRI MANIK RAO PATIL.—You must pull up the Government.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಇದೇನೂ ಹೊಸದಲ್ಲ. ಪ್ರಕಾಶ್ ಎಂಬ ತರುಣನ ಹತ್ಯೆಯಾಗಿದೆ. ಇದು ದುಃಖಿಕರವಾದ ಸಂಗತಿ. ಇದರ ಬಗ್ಗೆ ಸಂಪೂರ್ಣವಾಗಿ ತನಿಖೆಯಾಗಬೇಕು ಎನ್ನುವುದರಲ್ಲಿ ಸಂಶಯವಿಲ್ಲ. ಈಗಾಗಲೇ ನೋಟೀಸ್ ಕಳಿಸಿದ್ದೀರಿ. ಅದಕ್ಕೆ ಉತ್ತರ ತರಿಸಿ ಜವಾಬು ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನನ್ನ ಒಂದು ಮಾತು ಕೇಳಿ.

MR. DEPUTY SPEAKER.—Yesterday it was disallowed, I cannot allow you to raise that manner now. what power have I got to revise ?

SRI. M.S. KRISHNAN.—It is wrongly disallowed because this Minister is not concerned. when I am concerned and when the Minister is concerned it may be raised. I have not come here to quarel or growl.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಮಾಡಿದರೆ ಹೇಗೆ. ಕನ್‌ಸರ್ನ್ ಆಗದೇ ಇದ್ದರೆ ಹೇಳಿಬಿಟ್ಟು, ಇದು ಅವರಿಗೆ ಸಂಬಂಧಪಟ್ಟದು ಅಲ್ಲ ಎಂದು ಹೇಳಬೇಕು.

ಉಪಾಧ್ಯಕ್ಷರು.—ನಿಮಗಿಂತ ಚಿಕ್ಕ ವಯಸ್ಸಿನವರು, ತಾವು ಏಕೆ ಇಷ್ಟು ಸಿಟ್ಟು ಮಾಡಿಕೊಳ್ಳುತ್ತೀರಿ. ಒಂದು ಕೆಲಸ ಮಾಡಿ, ನನ್ನ ಛೇಂಬರಿಗೆ ಬನ್ನಿ ಕುಳಿತು ಡಿಸ್ಕಸ್ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಗಂಗಾರಾಂ ಬಿಲ್ಡಿಂಗ್ ಕುಸಿದು ಹೋಗಿದೆ, ಅದರ ಬಗ್ಗೆ ಚರ್ಚೆ ಆಗಿದೆ, ಉತ್ತರ ಕೊಟ್ಟಿದ್ದಾರೆ, ಜನರು ದಿನಾ ಸಾಯುತ್ತಾ ಇದ್ದಾರೆ.

MR. DEPUTY SPEAKER.—I should not have allowed this because this happened on 6-7-1983. But, taking into consideration the grievances of some people I have allowed Sri Moily to raise it.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅದರಲ್ಲಿ ಗುಲ್ಬರ್ಗ ಮತ್ತು ತಮಿಳುನಾಡಿನ ವರ್ಕರ್ಸ್ ಕೆಲಸ ಮಾಡುತ್ತಿದ್ದರು.

ಉಪಾಧ್ಯಕ್ಷರು.—ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದಕ್ಕೆ ಹೊಸದಾಗಿ ನೋಟೀಸ್ ತರಬೇಕಾದ್ದಿಲ್ಲ. ಬೇರೆ ಯಾವುದಾದರೂ ವಿಷಯವನ್ನು ತರಬೇಕಾದರೆ ಅದಕ್ಕೆ ನೋಟೀಸ್ ಬೇಕಾಗಿದೆ, ಆದರೆ ಈ ವಿಷಯ ಅವರ ಗಮನದಲ್ಲಿದೆ. ಗಂಗಾರಾಂ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕೊಲ್ಯಾಪ್ಸ್ ಆಗಿದೆ. ಸುಮಾರು ೩ ದಿವಸಗಳಿಂದ ಅಲ್ಲಿ ಕೆಲಸ ನಡೆದಿದೆ. ಪ್ರಾರಂಭದಲ್ಲಿ ಈ ಪ್ರಶ್ನೆಯನ್ನು ರೈಸ್ ಮಾಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಟ್ಟರು. ಅದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆದರೆ ಇತ್ತಿನ ಪರಿಸ್ಥಿತಿ ಹಾಗಿಲ್ಲ. ಮಾನ್ಯ ರಘುಪತಿಯವರು ಅಲ್ಲಿ ಹೋಗಿ ರಾತ್ರಿ ಹಗಲು ಇರುತ್ತಾರೆ ಎಂದು ಪೇಪರಿನಲ್ಲಿ ಬಂದಿದೆ, ಮಾನ್ಯ ಚಂದ್ರಶೇಖರ್‌ರವರು ಮತ್ತು ಅನೇಕ ಮಂತ್ರಿಗಳು ಭೇಟಿ ಕೊಟ್ಟಿದ್ದಾರೆ. ಆದರೆ ಅದಲ್ಲ ಪ್ರಶ್ನೆ. ಮಾನ್ಯ ಮುಖ್ಯ ಮಂತ್ರಿಗಳು ಆದಷ್ಟು ತೀವ್ರಗತಿಯಿಂದ ಎಲ್ಲಾ ಜನರ ಜೀವ ಉಳಿಸತಕ್ಕ ಸರ್ವಪ್ರಯತ್ನ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಅದಕ್ಕೆ ತಕ್ಕಂತೆ ಪ್ರಯತ್ನ ಅಲ್ಲಿ ನಡೆದಿಲ್ಲ. ಏಕೆ ನಡೆದಿಲ್ಲ ಅಂದರೆ ಗ್ರೌಂಡ್ ಫ್ಲೋರ್‌ನಲ್ಲಿರತಕ್ಕವರು ಚೀರಾಡುತ್ತಿದ್ದಾರೆ, ಈಗ ಯಾರೂ ಉಳಿದಿಲ್ಲ. ನಾನು ಖುದ್ದಾಗಿ ಹೋಗಿ ನೋಡಿ ಬಂದಿದ್ದೇನೆ ಮತ್ತು ಪೇಪರ್ ವರದಿ ಪ್ರಕಾರವಾಗಿ ಹೇಳುವುದಾದರೆ ಇನ್ನು ೧೦ ದಿವಸವಾದರೂ ಸಂಪೂರ್ಣವಾಗಿ ತೆಗೆದು ಹಾಕಿ ಜನರನ್ನು ಉಳಿಸಲಿಕ್ಕೆ ಆಗುವುದಿಲ್ಲ. ಪೇಪರಿನಲ್ಲಿ ೩೦ ಜನರು ಸತ್ತಿದ್ದಾರೆ ಎಂದು ಹೇಳಿದ್ದಾರೆ. ಸುಮಾರು ೨೦೦ಕ್ಕಿಂತಲೂ ಹೆಚ್ಚಿಗೆ ಜನ ಸತ್ತಿದ್ದಾರೆ. ಗುಲ್ಬರ್ಗದಿಂದ ೮೦ ಜನ ಬಂದಿದ್ದವರು ಆಪತ್ತಿನ ದಿವಸ ಇದ್ದರು ಇವರೆ ಜೊತೆಯಲ್ಲಿ ತಮಿಳುನಾಡಿನ ವರ್ಕರ್ಸ್ ಇದ್ದರು, ಮತ್ತು ಬೆಂಗಳೂರಿನಲ್ಲಿರತಕ್ಕವರೂ ಇದ್ದರು. ಹಾಗೂ ಸೇಲ್ಸ್ ಗರ್ಲ್ಸ್ ಕೆಲಸ ಮಾಡತಕ್ಕವರು ಸಹ ಇದ್ದರು. ಹೀಗೆ ನೂರಾರು ಜನ ಅದರ ಕೆಳಗೆ ಇದ್ದಾರೆ. ಇಲ್ಲಿ ಈಗ ಸ್ಲೋಪ್ರೊಸೆಸ್ ಕೆಲಸ ನಡೆದಿದೆ. ಸುಮಾರು ೨೦೦ ಜನ ಅದರಲ್ಲಿ ಸಿಕ್ಕಿ ಬಿದ್ದಿದ್ದಾರೆ, ಸಂಪೂರ್ಣವಾಗಿ ಸತ್ತು ಹೋಗಿದ್ದಾರೆ, ಒಬ್ಬರೂ ಬದುಕಿಲ್ಲ. ಆದುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ? ಎರಡನೆಯದಾಗಿ, ಅನೇಕ ಜನ ಅನ್ನವಿಲ್ಲದೆ ಬೀದಿಯಲ್ಲಿ ಕುಳಿತಿದ್ದಾರೆ. ಒಳಗಿದ್ದವರ ಪರಿಸ್ಥಿತಿ ಒಂದು, ಹೊರಗಿದ್ದವರ ಪರಿಸ್ಥಿತಿ ಇನ್ನೊಂದು. ಸರ್ಕಾರ ಇದರಲ್ಲಿ ಸ್ಲೋಪ್ರೊಸೆಸ್ ನಿಂದ ಕೆಲಸ ನಡೆಸುತ್ತಿದೆ. ಪ್ರಾರಂಭದಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಇವರು ಜಾಗ್ರತೆ ಮಾಡುತ್ತಾರೆ ಎನ್ನತಕ್ಕ ಕಾರಣದಿಂದ ಮೆಚ್ಚುಗೆಯನ್ನು ವ್ಯಕ್ತಪಡಿಸಿರಬಹುದು. ಆದರೆ ಇವತ್ತಿನ ಪರಿಸ್ಥಿತಿ ಹಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಿಷಯ ಇಷ್ಟೆ. ನಾನೂ ಕೂಡ ಮೊನ್ನೆ ರಾತ್ರಿ ಹೋಗಿದ್ದೆ ನಿನ್ನೆ ರಾತ್ರಿಯೂ ಹೋಗಿದ್ದೆ. ಸ್ಥಳೀಯ ಶಾಸಕರಾದ ಮಾನ್ಯ ನಾರಾಯಣರಾವ್‌ರವರು, ಸಚಿವರಾದ ಮಾನ್ಯ ರಘುಪತಿಯವರು ರಾತ್ರಿ ಅಲ್ಲಿ ಇದ್ದರು. ನ್ಯಾಯಾಂಗ ವಿಚಾರಣೆಗೆ ಆರ್ಡರ್ ಮಾಡಿದ್ದಕ್ಕೆ ನಾವು ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದೇವೆ. ಮೇಲಾಗಿ, ಅಗ್ನಿಶಾಮಕ ದಳದವರು. ಪೋಲೀಸರು ಪ್ರಾರಂಭದಲ್ಲಿ ಕೆಲಸಮಾಡಿದ್ದಾರೆ, ಅದಕ್ಕೆ ಮೆಚ್ಚುಗೆಯನ್ನು ಸೂಚಿಸಿದ್ದೇವೆ.

ಅನಂತರ ತಾವು ಅಲ್ಲಿ ಸಂಪೂರ್ಣವಾಗಿ ಸ್ವಾಧೀನ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾ ಇದ್ದಿರಿ. ಅಗ್ನಿಶಾಮಕ ದಳ ಮತ್ತು ಪೋಲೀಸ್ ದಳ ವಿತ್‌ಡ್ರಾ ಮಾಡಿದ್ದಾರೆ. ಆಪರೇಷನ್ ಏಕ್ಸ್‌ಪರ್ಟ್‌ನ್ನು ಇದಕ್ಕೆ ಕೊಟ್ಟಿದ್ದೇವೆಂದು ಹೇಳಿದಿರಿ. ನನಗೆ ತಿಳಿದ ಪರದಿ ಪ್ರಕಾರ ನಿನ್ನೆ ರಾತ್ರಿ ಫೋನನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡಿದರು. ೨–೩ ದಿವಸದ ನಂತರ ಫೋನಿನಲ್ಲಿ ಪುನಃ ಪ್ರಯತ್ನ ಮಾಡಿದಾಗ ಒಬ್ಬ ಜಯರಾಂ ಎನ್ನುವವನು ನಾನು ಇದ್ದೇನೆ ಎಂದು ಹೇಳಿದನಂತೆ. ಅದೇ ಪ್ರಯತ್ನ ಮೊದಲು ಮಾಡಿದ್ದರೆ ಯಾವ ಸ್ಥಳದಲ್ಲಿದ್ದಾನೆ ಎಂದು ಹುಡುಕಲಿಕ್ಕೆ ಸಾಧ್ಯವಿರುತ್ತಿತ್ತು. ಬಹುಶಃ ಗಂಗಾರಾಂ ಮತ್ತು ಅದಕ್ಕೆ ಸಂಬಂಧಪಟ್ಟ ಕಂಟ್ರಾಕ್ಟರುಗಳನ್ನು ತಕ್ಷಣ ಸಂಪರ್ಕಿಸಿ ಎಲ್ಲೆಲ್ಲಿ ಯಾವ ಯಾವ ಕೆಲಸ ಮಾಡುತ್ತಿದ್ದರು ಎಂಬ ಒಂದು ರೀತಿಯಾದ ಸಂಪೂರ್ಣ ಪಾದಂಥ ಜ್ಞಾನ ಸಂಗ್ರಹಣೆ ಮಾಡಲಿಲ್ಲ, ಸಂಗ್ರಹಣೆ ಮಾಡಿದ್ದರೆ ಯಾವ ಕಡೆ ಟನಲ್ ತೆಗೆಯಬೇಕು ಎಂದು ಗೊತ್ತಾಗುತ್ತಿತ್ತು ಆ ಕಡೆ ಹುಡುಕಬಹುದಾಗಿತ್ತು, ಇದರಲ್ಲಿ ಸಂಪೂರ್ಣ ವಿಫಲವಾಗಿದೆ. ೪೮ ಗಂಟೆ ಆದಮೇಲೆ ಯಾರು ಬದುಕುತ್ತಾರೋ ಹೋಗುತ್ತಾರೋ ನನಗೆ ಗೊತ್ತಿಲ್ಲ. ಅನೇಕ ಜನರನ್ನು ಬದುಕಿಸಲಿಕ್ಕೆ ಸಾಧ್ಯವಿತ್ತು. ನಿನ್ನೆ ಸಂಜೆ ಏಕ್ಸ್‌ಪರ್ಟ್‌ನ್ನು ಬರಲಿಕ್ಕೆ ಹತ್ತಿದರು ಅವರು ತಕ್ಷಣ ಬರಬೆಕಾಗಿತ್ತು. ಈ ಕಾರ್ಯಕ್ರಮ ಮೊದಲೇ ಮಾಡಿದ್ದರೆ ಅನೇಕ ಜನರನ್ನು ಬದುಕಿಸಲಿಕ್ಕೆ ಸಾಧ್ಯವಾಗುತ್ತಿತ್ತು, ಈಗ ಬದುಕಿಸಲಿಕ್ಕೆ ಆಗದೇ ಇದ್ದುದರಿಂದ ಅನೇಕ ಜನರ ಪ್ರಾಣ ಹೋಗಿದೆ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. At least there should have been a crash plan. normal operation plan, ಮೇಲೆ ಅದನ್ನು ತೆಗೆಯುತ್ತಾ ಇದ್ದಾರೆ. There is no crash plan at all. They should have thought or a crash plan, and lifted the thing. ಕ್ರಾಷ್ ಪ್ಲಾನ್ ಆಗಬೇಕು, ಅದು ಬಿದ್ದುಬಿಟ್ಟರೆ ಕಷ್ಟವಾಗುತ್ತದೆ. ಅವರ ಪ್ರಾಣ ಉಳಿಸಲಿಕ್ಕೆ ಪ್ರಯತ್ನ ಮಾಡಬೇಕು. ೧೫–೨೦ ಜನ ಸತ್ತೇ ಹೋದರು ಎಂದು ಕಾಣುತ್ತದೆ. ಅವರನ್ನು ಬದುಕಿಸಲಿಕ್ಕೆ ಖಂಡಿತವಾಗಿಯೂ ಸಾಧ್ಯವಿತ್ತು. As a layman I am telling because we can witness, we can see what is happening. ಇದನ್ನು ನೋಡಿದರೆ, I really felt bad ಇದು ಸ್ವಲ್ಪ ನಿಧಾನವಾಗಿದೆ. ಕಾರ್ಯಕ್ರಮ ನಿಧಾನವಾಗಿದೆ, ಆಲೋಚನೆ ಕೂಡ ನಿಧಾನವಾಗಿದೆ. ಆಲೋಚನೆ ಮತ್ತು ಕಾರ್ಯ ನಿಧಾನವಾಗಿದ್ದುದರಿಂದ ೨೦–೨೫ ಜನರ ಪ್ರಾಣ ಹೊರಟು ಹೋಯಿತು. I am not commenting on the expertise of the persons who are there, but I think the plan process itself is normal. ಅನೇಕ ಜನ ವಾಲೆಂಟರಿಯಾಗಿ ಕೆಲಸ ಮಾಡಿದ್ದಾರೆ, ಅವರ ಕೆಲಸದ ಬಗ್ಗೆ ಆಕ್ಷೇಪಣೆ ಎತ್ತುತ್ತಾ ಇಲ್ಲ. That is not the result of anybody's work according to me. ಪ್ರತಿಫಲ ಅಷ್ಟು ಬರಲಿಲ್ಲ ಎಂದು ಹೇಳುತ್ತಾ ಇದ್ದೇನೆ. ರಮೇಶ್ ಎಂಬ ಹುಡುಗ ಇದ್ದ, ಬೆಕ್ಕು ಹೊರಗೆ ಬಂತು, ಅವನನ್ನು ಎತ್ತಿ ಬಿಟ್ಟರು. ಆದುದರಿಂದ ಇದರ ಬಗ್ಗೆ ತಾವು ವಾರ್ ಫುಟಿಂಗ್‌ನಲ್ಲಿ, ಕ್ರಾಶ್ ಪ್ಲಾನ್ ಹಾಕಿಕೊಂಡು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಡಾ।। ವಿ. ಎಸ್. ಆಚಾರ್ಯ.—ಅಧ್ಯಕ್ಷರೇ, ಮೊನ್ನೆ ದಿವಸ ನಾನು ಸಹ ಅಲ್ಲಿಗೆ ಹೋಗಿದ್ದೆ. ರಾತ್ರಿ ಸಾಕಷ್ಟು ಜನರು ಅಲ್ಲಿ ಕೆಲಸ ಮಾಡುತ್ತಿದ್ದರು. ರಾತ್ರಿ ೧½ ಗಂಟೆಯವರೆಗೂ ಕೆಲಸ ಮಾಡುತ್ತಿದ್ದರು. ರಿಸ್ಕ್ ಆಪರೇಷನ್ ನಡದೇ ಇತ್ತು. ಆಲ್ಲಿ ಬಜಾಪೋ ಎನ್ನತಕ್ಕ ಕೂಗು ಕೇಳಿ ಬರುತ್ತಿತ್ತು. ಆದರೆ ಅವರನ್ನು ಉಳಿಸುವ ಬಗ್ಗೆ ಮಾತ್ರ ರಿಸ್ಕ್ ಆಪರೇಷನ್ ಕ್ವಿಕ್ ಆಗಿ ಆಗುತ್ತಿರಲಿಲ್ಲ. ಬೆಂಗಳೂರು ರಾಜಧಾನಿ ಇಲ್ಲಿ ಎಲ್ಲಾ ಸಕಲ ವಸ್ತುಗಳೂ ಸಿಗುತ್ತದೆ ಇಂಥಾ ಕಡೆಯಲ್ಲಿಯೇ ಈ ರೀತಿಯಾದರೆ ಇನ್ನು ಗುಲ್ಬರ್ಗ, ಬಿಜಾಪುರ ಇಂಥಾ ದೂರದ ಪ್ರದೆ ಶಗಳಲ್ಲಿ ಈ ರೀತಿಯಾದ ಪರಿಸ್ಥಿತಿ ಉಂಟಾದರೆ ಹೇಗೆ ? ಗಂಗಾರಾಮ ಬಿಲ್ಡಿಂಗ್‌ನ ಪ್ಲಾನ್ ಹುಡುಕುವುದಕ್ಕೆ ೨–೩ ದಿವಸ ತಡಮಾಡಿದ್ದಾರೆ. ಅದು ಬಿ.ಡಿ.ಎ.ನಲ್ಲಿ, ಕಾರ್ಪೊರೇಷನ್‌ನಲ್ಲಿ ಸಿಗುತ್ತಿರಲಿಲ್ಲವೇ ? ಈ ರೀತಿಯಾಗಿ ಪ್ರತಿಯೊಂದಕ್ಕೂ ಡಿಲೇ ಮಾಡುತ್ತಿದ್ದಾರೆ, ಮಾನ್ಯ ಮಂತ್ರಿಗಳವರು ಅಲ್ಲಿ ರಾತ್ರಿ ಹಗಲು ಇದ್ದು ಕೆಲಸ ಮಾಡಿಸುತ್ತಿದ್ದಾರೆ. ಇಲ್ಲವೆಂದು ಅಲ್ಲ. ಅಲ್ಲಿ ಎರಡು ಸ್ಕೈಯರ್ ಫೀಟ್ ಟನಲ್ ತೆಗೆದು ಹಾಕಿ ಈ ರೀತಿಯಾಗಿ ನಿಧಾನವಾಗಿ ಕೆಲಸವಾದರೆ ಅದರಿಂದ ರಿಸ್ಕ್ ಆಪರೇಷನ್ ಆಗುವುದಿಲ್ಲ. ನಾನು ಮೊನ್ನೆಯ ದಿವಸ ಅಲ್ಲಿಗೆ ಹೋಗಿ ನೋಡಿದಾಗ ಒಬ್ಬ ಹೆಣ್ಣು ಮಗಳ ಕಾಲು ಮಾತ್ರ ಆಚೆಗೆ ಕಾಣುತ್ತಿತ್ತು, ಆಕೆ ಇಳಕಲ್ ಸೀರೆಯನ್ನು ಉಟ್ಟುಕೊಂಡಿದ್ದಾಳೆ. ಅದೇ ಹೆಂಗಸು ಒಬ್ಬಳು ಶ್ರೀಮಂತಳ ಹೆಣ್ಣು ಮಗಳಾಗಿದ್ದರೆ ಆ ಕಾಲು ಮಾತ್ರ ಹಾಗೆ ಅರ್ಧಬಂರ್ಧ ಕಾಣುವ ಹಾಗೆ ತೋರಿಸುವುದಕ್ಕೆ ಬಿಡುತ್ತಿದ್ದರೇ ?

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಷಯದ ಬಗ್ಗೆ ನಮಗೆ ಅರಿವು ಆಗಿದೆ ಆ ದಿವಸ ಮಾನ್ಯ ವೀರಪ್ಪ ಮೊಯಿಲಿಯವರು ಸಹ ಅಲ್ಲಿಗೆ ಬಂದಿದ್ದರು. ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಅಲ್ಲಿ ಇಡೀ ರಾತ್ರಿ ಹಗಲು ಬಿ.ಎಚ್.ಇ.ಎಲ್. ಕೆಲಸಗಾರರು ಕೆಲಸ ಮಾಡುತ್ತಿದ್ದಾರೆ. ಮತ್ತೆ ಫೈಯರ್ ಫೈಟಿಂಗ್ ಫೋರ್ಸ್‌ನವರು ಮತ್ತು ಇತರರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಒಂದು ಕಡೆ ಟನಲ್ ತೆಗೆದು ಸುಮಾರು ೨೫–೩೦ ಅಡಿ ಒಳಕ್ಕೆ ಹೋಗಿದ್ದಾರೆ ಆದರೆ ಅಲ್ಲಿ ದೊಡ್ಡ ದೊಡ್ಡ ಬ್ಲಾಕ್‌ಗಳು ಅಡ್ಡ ಸಿಕ್ಕಿವೆ. ಆಗ ಅವರು ಆ ಜಾಗ ಬಿಟ್ಟು ಬೇರೆ ಕಡೆಯಿಂದ ಮತ್ತೆ ಟನಲ್‌ಗಳನ್ನು ಮಾಡಿಕೊಂಡು ಒಳಗಡೆ ಹೋಗುತ್ತಿದ್ದಾರೆ, ಆದರೆ ಯಾರೂ ಸಿಗುತ್ತಿಲ್ಲ ಈ ರೀತಿಯಾಗಿ ಟನಲ್ ತೆಗೆಯುತ್ತಾ ಒಳಗಡೆ ಹೋಗುತ್ತಿದ್ದರೆ ಆಕ್ಸಸ್ಮಿತ್ ಮತ್ತೆ ಬಿಲ್ಡಿಂಗ್ ಕುಸಿದು ಬೀಳಬಹುದೆಂದು ಅಲ್ಲಿಯ ಇಂಜಿನಿಯರ್ಸ್ ಅಭಿಪ್ರಾಯ ಪಡುತ್ತಿದ್ದಾರೆ. ಇನ್ನು ಅಲ್ಲಿ ಒಬ್ಬ ಹೆಣ್ಣು ಮಗಳ ಕಾಲು ಕಾಣಿಸುತಿತ್ತೆಂದು ಹೇಳಿದರು. ಅದು ನಿಜ ಆದರೆ ಅಲ್ಲಿ ಏನಾಗಿದೆ ಎಂದರೆ ಆ ಹೆಣ್ಣು ಮಗಳ ಕಾಲ ಮೇಲೆ ಒಂದು ದೊಡ್ಡ ಬ್ಲಾಕ್ ಬಿದ್ದು ಬಿಟ್ಟಿದೆ. ಅದು ಒಂದು ದೊಡ್ಡ ಗರ್ಡರ್ ಆಗಿದೆ. ಅದನ್ನು ಲಿಫ್ಟ್ ಮಾಡುವುದಕ್ಕೆ ಹೋದರೆ ಮತ್ತೆ ಬಿಲ್ಡಿಂಗ್ ಬಿದ್ದಿರತಕ್ಕದ್ದು ಇನ್ನು ಕುಸಿಯಬಹುದೆಂದು ತಜ್ಞರು ಅಭಿಪ್ರಾಯ ಪಟ್ಟಿರುವುದರಿಂದ ಮತ್ತು ಆಕೆ ಈಗಾಗಲೇ ಸತ್ತು ಹೋಗಿರುವುದರಿಂದ ಬಾಕಿ ಉಳಿದವರ ಪ್ರಾಣವನ್ನು ಉಳಿಸುವುದಕ್ಕಾಗಿ ಹೋರಾಟ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಬಗ್ಗೆ ಮತ್ತು ಅವರ ಪ್ರಾಮಾಣಿಕತೆಯ ಬಗ್ಗೆ ನಾವು ಹೇಳುತ್ತಿಲ್ಲ. ಆದರೆ ಅಲ್ಲಿ ನಾನು ಹೋಗಿ ನೋಡಿಕೊಂಡು ಬಂದ ಹಾಗೆ ಅಲ್ಲಿರತಕ್ಕ ಅಧಿಕಾರಿಗಳಲ್ಲಿ ಸರಿಯಾದ ಕೋ–ಆರ್ಡಿನೇಷನ್ ಇಲ್ಲ. ಇದರಿಂದಾಗಿ ಕೆಲಸ ನಿಧಾನವಾಗಿ ಸಾಗುತ್ತಿದೆ. ಹೀಗಾದರೆ ಬದುಕಿರುವವರ ಪ್ರಾಣವನ್ನು ಉಳಿಸುವುದಕ್ಕೆ ಸಾಧ್ಯವಾಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಶ್ರೀ ಚಂದ್ರಶೇಖರ್‌ರವರು ಇದ್ದಾರೆ, ಅವರೇನು ಹೇಳುತ್ತಾರೆ ಎಂಬುದನ್ನು ಕೇಳೋಣ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ...

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೇ, ಈ ರೀತಿಯಾಗಿ ಎಲ್ಲೂ ಆಗದೇ ಇರತಕ್ಕಂಥದ್ದು ಮೊದಲನೆಯ ಬಾರಿಗೆ ಆಗಿದೆ ಎಂದು ಹೇಳಬಹುದು. ಈ ರೀತಿಯಾಗಿ ೧೦ ಅಂತಸ್ತುಗಳ ಕಟ್ಟಡ ಕಟ್ಟುತ್ತಿರುವಾಗ ಪೂರ್ಣ ಭಾಗ ಕೆಳಕ್ಕೆ ಬಿದ್ದು ಹೋಗಿರತಕ್ಕದ್ದು ಇದೇ ಮೊದಲನೆಯ ಬಾರಿ ಎಂದು ತಾಂತ್ರಿಕರು ಅಭಿಪ್ರಾಯ ಪಡುತ್ತಿದ್ದಾರೆ. ಈಗ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಂದರೆ ಅಲ್ಲಿ ಕೋ–ಆರ್ಡಿನೇಷನ್ ಇಲ್ಲ, ಸರಿಯಾಗಿ ಕೆಲಸವಾಗುತ್ತಿಲ್ಲವೆಂದು ಹೇಳಿದರು. ಈ ಕೆಲಸ ಸಾಮಾನ್ಯ ಜನರಿಂದ ಆಗದೇ ಇರತಕ್ಕಂಥ ಕೆಲಸವಾಗಿದೆ. ಯಾರಿಗೆ ಇದರಲ್ಲಿ ಅನುಭವವಿರುತ್ತದೆಯೋ ಅಂಥವರ ಸಲಹೆ ಮೇರೆಗೆ ಮಾಡಬಹುದಾದಂಥ ಕೆಲಸವಾಗಿದೆ. ಇದರಲ್ಲಿ ಸಾಮಾನ್ಯವಾಗಿ ಮಿಲಿಟರಿಯವರಿಗೆ ಇಂಥಾದ್ದರಲ್ಲಿ ಸಾಕಷ್ಟು ಅನುಭವವಿರುತ್ತದೆಂದು ಎಂ.ಇ.ಜಿ. ಯವರನ್ನು ಕರೆಸಿದ್ದೇವೆ. ಅವರ ಜೊತೆಯಲ್ಲಿ ಫೈಯರ್ ಫೈಟಿಂಗ್ ಫೋರ್ಸ್‌ನವರೂ ಇದ್ದಾರೆ. ಇದರಲ್ಲಿ ನಾವು ಏನೂ ಅನುಭವ ಇಲ್ಲದೇ ಕೈ ಹಾಕುವುದಕ್ಕಿಂತ ಅನುಭವಿರತಕ್ಕಂಥವರನ್ನು ಕರೆಸಿ ಕೈಹಾಕುವುದು ಮೇಲೆಂದು ಅವರನ್ನು ಕರೆಸಿದ್ದೇವೆ. ಅದರಲ್ಲಿ ನೂರಾರು ಜನ ಇದ್ದಾರೆ, ಆದುದರಿಂದ ಮೇಲ್ಬಾಗದಿಂದ ತೆಗೆಯಬೇಕೆಂದು ಒಬ್ಬರು ಹೇಳುತ್ತಾರೆ. ಇನ್ನೊಬ್ಬರು ಇನ್ನೊಂದು ತರಹ ಹೇಳುತ್ತಿದ್ದಾರೆ. ನಾವು ಇದಕ್ಕೆಲ್ಲಾ ಅವಕಾಶ ಮಾಡಿಕೊಡಬಾರದು ಎಂದು ಇದರಲ್ಲಿ ಅನುಭವವಿರತಕ್ಕಂಥವರನ್ನೇ ಕರೆಸಿ ಕೆಲಸ ಪ್ರಾರಂಭ ಮಾಡಿಸಿದ್ದೇವೆ. ಇವತ್ತು ಒಬ್ಬ ವ್ಯಕ್ತಿಯನ್ನು ಉಳಿಸುವುದಕ್ಕಾಗಿ ೪–೫ ಜನ ಒಳಗಡೆ ಏನು ಹೋಗಿರುತ್ತಾರೆ ಅವರಿಗೆ ಏನಾದರೂ ಹೆಚ್ಚು ಕಡಿಮೆಯಾದರೆ ಅವರೇ ಸತ್ತು ಹೋಗುತ್ತಾರೆ, ಆದುದರಿಂದ ಇದರಲ್ಲಿ ಬಹಳ ರಿಸ್ಕ್ ಇದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಕುಸಿದು ಬಿದ್ದಿರತಕ್ಕ ಕಟ್ಟಡದಲ್ಲಿ ಟನಲ್‌ಗಳನ್ನು ಮಾಡಿಕೊಂಡು ಬಹಳ ಧೈರ್ಯವಾಗಿ ಒಳನುಗ್ಗಿ ಕೆಲಸ ಮಾಡುತ್ತಿರುವವರ ಬಗ್ಗೆ ತಾವು ನೋಡಬೇಕು. ಆದುದರಿಂದ ಅವರಿಗೆ ನಾವು ಏನಾದರೂ ಸಹಾಯ ಮಾಡಬಹುದೇ ಹೊರತು ಅಲ್ಲಿ ಕೆಲಸ ಮಾಡುತ್ತಿರುವವರ ಕಾರ್ಯದಲ್ಲಿ ನಾವು ಮಧ್ಯದಲ್ಲಿ ಕೈಹಾಕುವುದಕ್ಕಾಗುವುದಿಲ್ಲ.....

2-00 P.M.

ಎರಡನೆಯದಾಗಿ, ಊಟದ ವ್ಯವಸ್ಥೆ ಇಲ್ಲವೆಂದು ಹೇಳುತ್ತಿದ್ದಾರೆ. ನಾನು ಮತ್ತು ರಘುಪತಿ ಯವರು ಇದ್ದುಕೊಂಡು ಆಸ್ಪತ್ರೆಯಲ್ಲಿ ನೋಡುವುದಕ್ಕೆ ಬರುವವರಿಗೆ ಹೊತ್ತಿಗೆ ಸರಿಯಾಗಿ ಊಟದ ವ್ಯವಸ್ಥೆ ಮತ್ತು ಅವರು ಮಲಗಿಕೊಳ್ಳುವುದಕ್ಕೆ ಸ್ಥಳದ ವ್ಯವಸ್ಥೆ ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ಲೋಪ ಇಲ್ಲ. ನಮ್ಮ ಕೈಲಾದ ಕೆಲಸವನ್ನು ನಾವು ಮಾಡುತ್ತಿದ್ದೇವೆ. ತಾಂತ್ರಿಕ ವಿಚಾರದಲ್ಲಿ ಪರಿಣಿತರು ಇದ್ದು ಸಲಹೆ ಕೊಡುವುದಾದರೆ ಅದನ್ನೂ ಸ್ವಾಗತಿಸುತ್ತೇವೆ.

ಶ್ರೀ ಎಂ. ರಘುಪತಿ.— ತಾಂತ್ರಿಕ ತಜ್ಞರು ಯಾರ್ಯಾರಿದ್ದಾರೆ ಅವರನ್ನು ಕರೆಸುವುದಕ್ಕೆ ಏರ್ಪಾಡು ಮಾಡಿ ಎಂದು ಮೊಯಿಲಿಯವರು ಸಲಹೆ ಕೊಟ್ಟರು. ಆ ವಿಚಾರ ಬೆಳಿಗ್ಗೆ ರೌಂಡಿಯೋದಲ್ಲಿ ಕೂಡ ಬಂತು. ಆ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಒಟ್ಟಿನಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಆಧಿಕಾರಿಗಳು ಮತ್ತು ಆರ್ಮಿಯವರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಫೋನ್ ಸಂಪರ್ಕವನ್ನು ನಿನ್ನೆ ಮಾಡುವುದೆ? ಮೊನ್ನೆಯೇ ಮಾಡಬಹುದಿತ್ತಲ್ಲ. ಮೊದಲೇ ಇದನ್ನೆಲ್ಲಾ ನೋಡಿಕೊಳ್ಳುವುದಲ್ಲವೆ? ಆದ್ದರಿಂದ ಅಲ್ಲಿನ ವ್ಯವಸ್ಥೆ ಸರಿಯಿಲ್ಲ. ಆರ್ಮಿಯವರಿಗೆ ಸರಿಯಾದ ಡೈರೆಕ್ಷನ್ ಕೊಡದಿರುವುದು ಸರಿಯಲ್ಲ. ಗಂಗಾರಾಂ ಹತ್ತಿರ ನಿನ್ನೆ ಮಾತುಕತೆ ನಡೆದಿದೆ ಎಂದು ಗೊತ್ತಾಗಿದೆ, ಅದು ಕೂಡ ಸರಿಯಲ್ಲ.

ಶ್ರೀ ಎಂ. ರಘುಪತಿ.— ಫೋನಿಗೆ ಕೇಬಲ್ ಲೈನ್ ಸಿಕ್ಕಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.... ಅವರು ಪ್ರಯತ್ನ ಮಾಡಿದ್ದು ನಿನ್ನೆ, ಮೊನ್ನೆ ಏನೂ ಮಾಡಿಲ್ಲ.

ಶ್ರೀ ಎಂ. ರಘುಪತಿ.— ಲೈನ್ ಸಿಕ್ಕಿಲ್ಲವೆಂದರೆ ಎಲ್ಲಿ ಪ್ರಯತ್ನ ಮಾಡುವುದು? ನಿನ್ನೆ ಒಂದ ಲೈನ್ ಸಿಕ್ಕಿದ್ದರಿಂದ ಮೈಯಿನಿಗೆ ಕನೆಕ್ಷನ್ ಕೊಟ್ಟಿದ್ದಾರೆ.

IV. MOTION FOR EXTENSION OF TIME FOR THE PRESENTATION OF REPORTS OF JOINT SELECT COMMITTEES

SRI A. LAKSHMI SAGAR (Minister for Law, Parly, Affairs & Housing).— Sir on behalf of.

SRI ABDUL NAZIR SAB (Minister for Rural Development and Panchayat Raj).— I be go to move.

"That the time fixed for the presentation of the R port of the Joint Select Committee on the Karnataka Zilla Parishads, Mandal Panchayats and Nyaya Panchayats Bill 1983 be extended upto the eighteenth day of October 1983."

MR. DEPUTY SPEAKER.— The question is:

"That the time fixed for the presentation of the R port of the Joint Select Committee on the Karnatak Zilla Parishads, Mandal Panchayats and Nyaya Panchayats Bill 1983 be extended upto the eighteenth day of October 1983."

The Motion was Adopted